೨. ಸಿಆರ್‌ಎಫ್ ಅಡಿಯಲ್ಲಿ ರೂ.೧೬೦ ಲಕ್ಷಗಳ ಮೊತ್ತದಲ್ಲಿ ೮ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು, ೪೦ ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ .

೩. ೭೫ ಕೋಟಿ ರೂ. ಅನುದಾನದ ಯೋಜನೆಯಡಿ ೪೫೦ ಲಕ್ಷ ರೂ. ಅಂದಾಜು ಮೊತ್ತದಲ್ಲಿ ೧೭ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ೬೯೩.೫೦ ಕಿಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

೪. ನಬಾರ್ಡ್ ಯೋಜನೆಯಡಿ ೩೫೭೫.೨೩ ಲಕ್ಷ ಅಂದಾಜು ಮೊತ್ತದಲ್ಲಿ ೮೨ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ೩೦ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಇನ್ನುಳಿದ ೫೨ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆ ಅಡಿ ಒಟ್ಟು ೭೦೧.೮೫ ಕಿ.ಮೀ. ಉದ್ದ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಗುರಿ ಹೊಂದಿದ್ದು ಈವರೆಗೆ ೨೫೯ಕಿಮೀ.ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದೆ.

೫. ಇದಲ್ಲದೇ ವಿಶ್ವಬ್ಯಾಂಕ್ ಧನ ಸಹಾಯ ಯೋಜನೆಯಡಿ ೨೯೫ ಕಿಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಹಾಗೂ.

೬. ಹುಡ್ಕೊ ನೆರವಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ (ಕೆ.ಆರ್.ಡಿ.ಸಿ.ಎಲ್.) ೧೨೭೭.೫೩ ಲಕ್ಷ ರೂ.ಗಳ ಅಂದಾಜಿನಲ್ಲಿ ೪೬೫.೯೦ ಕಿಮೀ.ಉದ್ದದ ರಾಜ್ಯ ಹೆದ್ದಾರಿಗಳ ಮೂರು ಸಾಲಿಗೆ ನಿರ್ವಹಣೆ ಮಾಡಲು ಗುತ್ತಿಗೆ ಕರೆಯಲಾಗಿದೆ ಸದ್ಯದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು.

3. ಮೇಲೆ ಕಾಣಿಸಿದ ಕ್ರಮ ಸಂಖ್ಯೆ ೧ ರಿಂದ ೨ ರಲ್ಲಿನ ಕಾಮಗಾರಿಗಳನ್ನು ಜೂನ್ ೨೦೦೧ರ ಅಂತ್ಯಕ್ಕೆ ಮುಗಿಸಲಾಗುವುದು, ಕ್ರಮ ಸಂಖ್ಯೆ ೩ರ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಅವುಗಳನ್ನು ೨೦೦೨ ಮಾರ್ಚ್‌ದೊಳಗೆ ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಕ್ರಮ ಸಂಖ್ಯೆ ೪ ರಲ್ಲಿ ಸೂಚಿಸಿರುವ ವಿಶ್ವಬ್ಯಾಂಕ್ ಸಹಾಯದಲ್ಲಿ ಕೈಗೊಳ್ಳಲಿರುವ ಕೆಲಸಗಳನ್ನು ಶೀಘ್ರದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು.

ಸೇಡಂ ಕ್ಷೇತ್ರದ ವ್ಯಾಪ್ತಿಯ ವನಮಾರಂಪಲ್ಲಿ ರಾಯಚೂರು ರಸ್ತೆಯ ದುರಸ್ತಿ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ(ಸೇಡಂ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಗುಲ್ಬರ್ಗ ಜಿಲ್ಲೆಯ ಸೇಡಂ ಕ್ಷೇತ್ರದ ವ್ಯಾಪ್ತಿಯ ವನಮಾರಂಪಲ್ಲಿ-ರಾಯಚೂರು ಹಾಗೂ ಸೇಡಂ ಕ್ಷೇತ್ರದ ವ್ಯಾಪ್ತಿಯಲ್ಲಿ ಚಿಂಚೋಳಿಯಿಂದ ಸೇಡಂವರೆಗೆ ಇರುವ ರಸ್ತೆಗಳಿಗೆ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

2. ದುರಸ್ತಿ ಮಾಡಿದ ಈ ರಸ್ತೆಯ ಮೇಲೆ ದೊಡ್ಡ ದೊಡ್ಡ ಕೊರಕಲುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯುಂಟಾಗಿದ್ದು ನಿಜವಲ್ಲವೆ?

3. ಹಾಗಿದ್ದಲ್ಲಿ ಈ ರಸ್ತೆಯನ್ನು ಸರಿಪಡಿಸಿ ವಾಹನಗಳ ಮತ್ತು ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಕ್ರಮ ಕೈಕೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಈ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ವ್ಯಾಪ್ತಿಯಲ್ಲಿ ವನಮಾರಪಲ್ಲಿ ರಾಯಚೂರು (ರಾಜ್ಯ ಹೆದ್ದಾರಿ) ಹಾಗೂ ಸೇಡಂ ಕ್ಷೇತ್ರದ ವ್ಯಾಪ್ತಿಯಲ್ಲಿ ಚಿಂಚೋಳಿಯಿಂದ ಸೇಡಂ (ರಾಜ್ಯ ಹೆದ್ದಾರಿ)ವರೆಗೆ ಇರುವ ರಸ್ತೆಗಳಿಗೆ ಇಲ್ಲಿಯವರೆಗೆ ವಾರ್ಷಿಕ ನಿರ್ವಹಣೆಗಾಗಿ ಖರ್ಚಾಗಿರುವ ಹಣ ಕ್ರಮವಾಗಿ ರೂ.೭.೮೯ ಹಾಗೂ ರೂ.೨.೩೭ ಲಕ್ಷಗಳಾಗಿರುತ್ತದೆ.

2. ಈ ರಸ್ತೆಯ ದುರಸ್ತಿ ನಿರ್ವಹಿಸುವ ಪೂರ್ವದಲ್ಲಿ ಅತಿವೃಷ್ಟಿಯಿಂದ ಮತ್ತು ವಾಹನಗಳ ಸಂಚಾರದಿಂದ ದೊಡ್ಡ ದೊಡ್ಡ ಕೊರಕಲುಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿರುವುದು ನಿಜ.

3. ಪ್ರಸ್ತುತ ವಾರ್ಷಿಕ ದುರಸ್ತಿ ಯೋಜನೆ ಅಡಿಯಲ್ಲಿ ತೆಗ್ಗು ಗುಂಡಿಗಳನ್ನು ಮುಚ್ಚುವ ದುರಸ್ತಿ ನಡೆಯುತ್ತಿದೆ. ಶೀಘ್ರದಲ್ಲಿಯೇ ರಸ್ತೆಯನ್ನು ಸರಿಪಡಿಸಿ ವಾಹನಗಳ ಮತ್ತು ನಾಗರೀಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು.

ಇದು ಅಲ್ಲದೇ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಹುಡ್ಕೋ ನೆರವಿನಿಂದ ಈ ರಸ್ತೆಯನ್ನು ಬರುವ (೩) ವರ್ಷಗಳ ಅವಧಿಗಾಗಿ ನಿರ್ವಹಣೆಯ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು ನಿರ್ವಣೆಯ ಹೊಣೆಗಾರಿಕೆಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ.

ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಸೇಡಂ ಕ್ಷೇತ್ರದ ಕಾಮಗಾರಿಗಳು.